# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## Misc. 04/2022

**ಸಾಕ್ಷಿಯನ್ನು ದಿಃ 16.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀ ಎಂ. ಆರ್ ಹೆಚ್ ವಕೀಲರಿಂದಃ-

ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಅರ್ಜಿದಾರರು ನಿವೃತ ಶಿಕ್ಷಕರು.ಈ ಕೇಸನ್ನು ಅರ್ಜಿದಾರರು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಅರ್ಜಿದಾರರು ಈ ಅರ್ಜಿಯಲ್ಲಿ ನಾನು ಇದ್ದ ವಿಳಾಸವನ್ನೇ ನೀಡಿದ್ದಾರೆ. ಅವರು ಮನೆ ನಂ. 441, ಟ್ಯಾಂಕ್ ರಸ್ತೆ, ಹೂಟಗಳ್ಳಿ ಎಂಬ ವಿಳಾಸ ನೀಡಿದ್ದಾರೆ. ಎಂ.ಸಿ ನಂ. 25/2019 ರಲ್ಲಿ ನನ್ನ ಗಂಡನ ವಿಳಾಸವನ್ನು ನಾನು ಕೊಟ್ಟಿರಲಿಲ್ಲ. ನಾನು ಎಂ.ಸಿ ನಂಃ 25/2019 ರಲ್ಲಿ ಸಾಕ್ಷಿ ನೀಡಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ಪ್ರಕರಣದಲ್ಲಿ ನಾನು ನನ್ನ ಗಂಡನಿಗೆ ನೋಟೀಸ್ ಕೊಟ್ಟಿದ್ದೆ. ಅನಂತ ನಿಲಯ, ಮಾರಿಗುಡಿ ರಸ್ತೆ, ಎಸ್.ಆರ್.ಎಸ್ ಕಾಲೋನಿ ಹೂಟಗಳ್ಳಿ ಎಂಬ ವಿಳಾಸಕ್ಕೆ ನೋಟೀಸ್ ನೀಡಿದ್ದೆ. ನಾನು ನೀಡಿದ ನೋಟೀಸ್ಗೆ ಅವರು ನಿಪಿ-8 ರಂತೆ ಉತ್ತರ ಕೊಟ್ಟಿದ್ದರು. ಸದರಿ ಉತ್ತರದ ನೋಟಿಸನ್ನು ನಾನು ಓದಿ ತಿಳಿದುಕೊಂಡಿದ್ದೆ. ಅವರು ತಮ್ಮ ಉತ್ತರದ ನೋಟಿಸ್ ನಲ್ಲಿ ತಾನು ಯಾವ ವಿಳಾಸದಲ್ಲಿ ವಾಸ ಇದ್ದೇನೆ ಮತ್ತು ನಾನು ಅವರಿಗೆ ಯಾವ ವಿಳಾಸಕ್ಕೆ ನೋಟಿಸ್ ಕೊಟ್ಟಿದ್ದೇನೆ ಎಂದು ಬರೆಸಿದ್ದಾರೆ. ಎಂ.ಸಿ ನಂ. 25/2019 ನ್ನು ದಾಖಲಿಸುವ ಪೂರ್ವದಲ್ಲಿ ನಿಪಿ-8 ರಂತೆ ನೀಡಿದ ಉತ್ತರದ ನೋಟಿಸ್ ನಲ್ಲಿ ನನ್ನ ಗಂಡ ನಾನು ಹೇಳಿರುವ ವಿಳಾಸ ಸರಿ ಇಲ್ಲ ಎಂದು ಹೇಳಿದ್ದಾರೆ ಎಂದರೆ ಸರಿ. ಸದರಿ ಉತ್ತರದ ನೋಟಿಸ್ ನಲ್ಲಿ ಪಕ್ಕದ ಅಂಗಡಿಯವರು ನೋಟಿಸಿ ಬಂದ ವಿಚಾರ ತಿಳಿಸಿದ ಮೇರೆಗೆ ತಾನು ನೋಟಿಸ್ ಸ್ವೀಕರಿಸಿರುವುದಾಗಿ ಹೇಳಿದ್ದಾರೆ ಎಂದರೆ ಸರಿ. ನಿಪಿ-8ರ ಉತ್ತರದಲ್ಲಿ ನನ್ನ ಗಂಡ ತಮ್ಮ ಸರಿಯಾದ ವಿಳಾಸ ಎಂ,ಬಿ ಸುರೇಶ ಬಿನ್ ಬೊಮ್ಮರಾಯಿಗೌಡ ನಿವೃತ ಮುಖ್ಯೋಪಾಧ್ಯಾಯ, ನಂ. 441, ಹರಂಜಿ ಕೆರೆ (ಕಟ್ಟೆ) ರಸ್ತೆ, ಹೂಟಗಳ್ಳಿ, ಮೈಸೂರು ಎಂದು ಹೇಳಿದ್ದಾರೆ ಎಂದರೆ ಸರಿ. ಎಂ.ಸಿ ನಂ. 25/2019 ನ್ನು ದಾಖಲಿಸುವಾಗ ಮೇಲೆ ಹೇಳಿದ ವಿಳಾಸವನ್ನು ವಕೀಲರಿಗೆ ಹೇಳಿದ್ದೇನೆ. ಮೇಲೆ ಹೇಳಿದ ವಿಳಾಸಕ್ಕೆ ಎಂ.ಸಿ ನಂಃ 25/2019 ರಲ್ಲಿ ನೋಟಿಸ್ ಅಥವಾ ಸಮನ್ಸ್ ಜಾರಿಗೊಳಿಸಿದ್ದಿರಾ

ಎಂದರೆ ಕಳುಹಿಸಿದ್ದೇನೆ.ಎಂ.ಸಿ ನಂ. 252019 ರಲ್ಲಿ ದಿಃ 24.01.2020 ರಂದು ನಾನು ಎಂ.ಬಿ ಸುರೇಶ್ ಬಿನ್ ಬೊಮ್ಮರಾಯಗೌಡ, ನಿವೃತ ಶಿಕ್ಷಕರು, C/o ಆನಂದ ಬೈರೇವಶ್ವರ ನಿಲಯ, (ಅಂಗಡಿ ಮನೆ) ನಂ.128/2 ಹೂಟಗಳ್ಳಿ ಗ್ರಾಮ, ಮುಖ್ಯ ರಸ್ತೆ, ಮೈಸೂರು ತಾಲ್ಲೂಕು ಎಂಬ ವಿಳಾಸಕ್ಕೆ ನ್ಯಾಯಾಲಯದಿಂದ ನೋಟಿಸ್ ತೆಗೆದುಕೊಂಡಿದ್ದೆ ಎಂದರೆ ಸರಿ. ನ್ಯಾಯಾಲಯದಿಂದ ಹೋದ ದಿಃ 24.01.2020ರ ನೋಟಿಸ್ No such address ಎಂಬ ಕಾರಣದಿಂದ ವಾಪಸ್ಸು ಬಂದಿದೆ ಎಂದರೆ ಸರಿ. ನಂತರ ನೋಂದಾಯಿತ ಅಂಚೆಯ ಮೂಲಕ ನೋಟಿಸ್ ತೆಗೆದುಕೊಳ್ಳಬೇಕೆಂದು ನ್ಯಾಯಾಲಯ ಆದೇಶ ಮಾಡಿತು ಎಂದರೆ ಸರಿ. ದಿಃ 20.02.2020ರ ನ್ಯಾಯಾಲಯದ ಆದೇಶದ ಪ್ರಕಾರ ನೋಂದಾಯಿತ ಅಂಚೆಯಲ್ಲಿ ನೋಟಿಸ್ ಕಳುಹಿಸುವ ಕ್ರಮವನ್ನು ನಾನು ಪಾಲಿಸಲಿಲ್ಲ ಎಂದರೆ ಸರಿ. ದಿಃ 23.04.2020ರ ವರೆಗೆ ನೋಂದಾಯಿತ ಅಂಚೆಯಲ್ಲಿ ನೋಟಿಸ್ ಕಳುಹಿಸುವ ಕ್ರಮವನ್ನು ನಾನು ಕೈಗೊಳ್ಳಲಿಲ್ಲ ಎಂದರೆ ವಕೀಲರು ಮಾಡದೇ ಇರಬೇಕು. ನಂತರ ನಾನು ಕ್ರಮವನ್ನು ತಪ್ಪಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ Affixure ಮೂಲಕ ನೋಟಿಸ್ ಜಾರಿಗೊಳಿಸಲು ಅರ್ಜಿ ಸಲ್ಲಿಸಿದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಕೇಳಿದಂತೆ ಮನೆಯ ಗೋಡೆಗೆ ನೋಟಿಸನ್ನು ಅಂಟಿಸುವ ಮೂಲಕ ಜಾರಿಗೊಳಿಸುವ ಪ್ರಕ್ರಿಯೇಯನ್ನು ನಾನು ಪಾಲಿಸಲಿಲ್ಲ ಎಂದರೆ ಸರಿ. ಸದರಿ ಅರ್ಜಿ ಬಾಕಿ ಇರುವಾಗಲೇ ನಾನು ಪತ್ರಿಕಾ ಪ್ರಕಟಣೆಯ ಮೂಲಕ ನೋಟಿಸ್ ಜಾರಿಗೊಳಿಸಲು ಕ್ರಮ ತೆಗೆದುಕೊಂಡೆ ಎಂದರೆ ಸರಿ. ನಾನು ಮೇಲೆ ಹೇಳಿದ C/o ಆನಂದ ಬೈರೇವಶ್ವರ ನಿಲಯ, (ಅಂಗಡಿ ಮನೆ) ನಂ.128/2 ಹೂಟಗಳ್ಳಿ ಗ್ರಾಮ, ಮುಖ್ಯ ರಸ್ತೆ, ಮೈಸೂರು ತಾಲ್ಲೂಕು ವಿಳಾಸಕ್ಕೆ ಪತ್ರಿಕಾ ಪ್ರಕಟಣೆಯ ಮೂಲಕ ನನ್ನ ಗಂಡನಿಗೆ ನೋಟಿಸ್ ತೆಗೆದುಕೊಂಡೆ ಎಂದರೆ ಸರಿ. ನಾನು ಎಂ.ಸಿ ನಂಃ 25/2019 ರಲ್ಲಿ ನನ್ನ ಗಂಡನ ಸುಳ್ಳು ವಿಳಾಸವನ್ನು ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸರಿಯಾದ ವಿಳಾಸವನ್ನು ಕಾಣಿಸದೇ ಇರುವ ಕಾರಣವೇ ಎಂ. ಸಿ ನಂ. 25/2019 ರಲ್ಲಿ ನನ್ನ ಗಂಡನಿಗೆ ಪ್ರಕರಣದ ನೋಟಿಸ್ ಸರಿಯಾಗಿ ಜಾರಿಯಾಗಿಲ್ಲ ಎಂದರೆ ವಕೀಲರು ಕಳುಹಿಸಿದ್ದಾರೆ ಎಂದು ಅಂದುಕೊಂಡಿದ್ದೆ. ನಿಪಿ-8 ರಲ್ಲಿ ನನ್ನ ಗಂಡ ಕಾಣಿಸಿದ ಅವರ ಸರಿಯಾದ ವಿಳಾಸವನ್ನು ನಾನು ಎಂ.ಸಿ ನಂಃ 25/2019 ರಲ್ಲಿ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಎಂ.ಸಿ ನಂಃ 25/2019 ರಲ್ಲಿ ನನ್ನ

ಗಂಡನಿಗೆ ಸರಿಯಾಗಿ ನ್ಯಾಯಾಲಯದ ನೋಟಿಸನ್ನು ಜಾರಿಗೊಳಿಸದೇ ಅವರ ಬೆನ್ನ ಹಿಂದೆ ಮೋಸದಿಂದ ವಿವಾಹ ವಿಚ್ಛೇಧನೆಯ ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಎಂ.ಸಿ ನಂಃ 25/2019 ರಲ್ಲಿ ಸರಿಯಾದ ವಿಳಾಸವನ್ನು ನೀಡಿ ನನ್ನ ಗಂಡನಿಗೆ ನೋಟಿಸ್ ಜಾರಿಯಾದರೆ ವಿವಾಹ ವಿಚ್ಛೇಧನೆಗೆ ತಕರಾರು ಮಾಡುತ್ತಾರ ಎಂದು ಸರಿಯಾದ ವಿಳಾಸವನ್ನು ನಾನು ಉದ್ದೇಶಪೂರ್ವಕವಾಗಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಹೂಟಗಳ್ಳಿಗೆ ಹೋಗಿ ವಿವಾಹ ವಿಚ್ಛೇಧನೆ ಆದ ಬಗ್ಗೆ ಪ್ರಚಾರ ಮಾಡಿಲ್ಲ. ಅವರಿಗೆ ಗೊತ್ತಿತ್ತು. ನಾನು ಹೂಟಗಳ್ಳಿಗೆ ಹೋಗಿ ಡೈವರ್ಸ್ ಬಗ್ಗೆ ಪ್ರಚಾರ ಮಾಡಿದ ನಂತರ ನನ್ನ ಗಂಡ ಅದನ್ನು ತಿಳಿದುಕೊಂಡು ಬಂದು ಈ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ವಿಳಾಸ ನೀಡಿ ಸುಳ್ಳು ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಎಂ.ಸಿ ನಂ. 25/2019 ರಲ್ಲಿ ನಾನು ಕಾಣಿಸಿದ ವಿಳಾಸದಲ್ಲಿ ನನ್ನ ಗಂಡ ವಾಸ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.